## ‘ಮಳೆ ಬರುತ್ತಾ?’

ಗುಂಡ ಹವಾಮಾನ ಇಲಾಖೆಯ ಅಧಿಕಾರಿ. ಅಂದು ಟೆಲಿಫೋನ್ ರಿಂಗಾದಾಗ, ‘ಹಲೋ’ ಎಂದ. ಹೆಂಗಸೊಬ್ಬಳು, ‘ಸಾರ್ ಇವತ್ತು ಮಳೆ ಬರುತ್ತಾ?’ ಎಂದು ಕೇಳಿದಳು. ಗುಂಡ, ‘ಬಂದರೂ ಬರಬಹುದು’ ಎಂದ. ಮಾರನೆಯ ದಿನ ಅದೇ ಹೆಂಗಸು, ‘ಸಾರ್ ಇವತ್ತೇನಾದರೂ ಮಳೆ ಬರುತ್ತಾ?’ ಎಂದಾಗ ಗುಂಡ, ‘ಬರುವ ಸೂಚನೆಯೇನೋ ಇದೆ. ಆದರೆ, ಗ್ಯಾರಂಟಿ ಇಲ್ಲ’ ಎಂದ. ಮತ್ತೆ ಮೂರನೆಯ ದಿನವೂ ಆಕೆ ಫೋನ್ ಮಾಡಿ, ‘ಸಾರ್ ಮೋಡ ಕವಿದಿದೆ. ಇವತ್ತು ಮಳೆ ಬರಬಹುದಾ?’ ಎಂದು ಕೇಳಿದಳು. ಗುಂಡ, ‘ಏನು ತಾಯಿ, ಮೂರು ದಿನದಿಂದ ಇದನ್ನೇ ಕೇಳ್ತಾ ಇದೀರಲ್ಲಾ ಯಾಕೆ?’ ಎಂದ. ಅದಕ್ಕೆ ಆಕೆ, ‘ಏನಿಲ್ಲಾ ಸಾರ್! ನಮ್ಮ ಟೆರೇಸ್ ಮೇಲೆ ಅರಳು ಸಂಡಿಗೆ ಇಡಬೇಕಾಗಿತ್ತು. ಅದಕ್ಕೆ’ ಎಂದಳು.

**ಎಂ.ಕೆ. ಮಂಜುನಾಥ್**





## ಎರಡೆರಡು

ಮಲ್ಲೇಶಿಗೆ ದೃಷ್ಟಿದೋಷದ ಸಮಸ್ಯೆ ಹೆಚ್ಚಾಗಿ ಎಲ್ಲವೂ ಎರಡೆರಡಾಗಿ ಕಾಣಲು ಪ್ರಾರಂಭವಾದ್ದರಿಂದ ನಿರ್ವಾಹವಿಲ್ಲದೇ ವೈದ್ಯರ ಬಳಿ ಒಬ್ಬನೇ ಬಂದಿದ್ದ. ‘ಏನು ಸಮಸ್ಯೆ?’ ಎಂದು ವೈದ್ಯ ಮಹಾಶಯರು ಅವನತ್ತ ನೋಡುತ್ತ ಅಸಹನೆಯಿಂದ ಪ್ರಶ್ನಿಸಿದ್ದರು. ‘ನನಗೆಲ್ಲವೂ ಎರಡೆರಡಾಗಿ ಕಾಣುತ್ತಿದೆ ಡಾಕ್ಟ್ರೇ... ಬಹಳ ಕಷ್ಟ ಆಗ್ತಿದೆ...’ ತನ್ನ ನೋವು ತೋಡಿಕೊಂಡ. ‘ಅಲ್ರೀ, ಕಣ್ಣಿನ ತೊಂದ್ರೆ ಇದ್ದದ್ದು ನಿಮಗಲ್ಲವೆ? ನೀವೊಬ್ರೇ ಒಳಗೆ ಬರಬೇಕು... ಅದ್ಯಾಕ್ರೀ ನಾಲ್ಕು ಜನ ಒಳಗೆ ನುಗ್ಗಿದೀರಾ? ಇದೇನು ಜಾತ್ರೆಯೇ?...’ ಎಂದು ಗದರಿಸಿದರು. ಮಲ್ಲೇಶಿ ಪೆಚ್ಚಾಗಿ ನಿಂತ.

**ಲತಾ ಹೆಗಡೆ**

ಕಲೆ: ಗಣೇಶ ಆಚಾರ್ಯ